<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು, ದಿನಾಂಕ:**01.04.2025**</u>
<u>ಮುಖ್ಯ ವಿಚಾರಣೆ:- ಪಿರ್ಯಾದಿದಾರರ ಪರ ವಕೀಲರಿಂದ:-</u>

ನಾನು ನನ್ನ ಮೌಖಿಕ ಮುಖ್ಯ ವಿಚಾರಣೆ ಬದಲಾಗಿ ಈಗ ಸಲ್ಲಿಸಿದ ಪ್ರಮಾಣ ಪತ್ರವನ್ನು ಮುಖ್ಯ ವಿಚಾರಣೆಯಾಗಿ ಪರಿಗಣಿಸಲು ಕೋರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯದಿಂದ ಕೂಡಿದ್ದು ಅದನ್ನು ನನ್ನ ಸೂಚನೆ ಮೇರೆಗೆ ತಯಾರಿಸಲಾಗಿರುತ್ತದೆ. ನಾನು ಅದನ್ನು ಓದಿ, ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಪಿರ್ಯಾದಿಗೆ ಸಂಬಂಧಪಟ್ಟ ದಾಖಲೆಗಳು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ಈಗ ನೋಡುತ್ತಿರುವ ಪ್ರಗತಿ ಗ್ರಾಮೀಣಾ ಬ್ಯಾಂಕ್ ಚೆಕ್ ಆರೋಪಿ ನನಗೆ ನೀಡಿದ ಚೆಕ್ ಇರುತ್ತದೆ. ಸಾಕ್ಷಿ ನೋಡಿ ಗುರುತಿಸಿದ ಸದರಿ ಚೆಕ್ ನ್ನು ನಿ.ಪಿ.1 ಎಂದು ಗುರುತಿಸಲಾಯಿತು. ಸದರಿ ಚೆಕ್ ನಲ್ಲಿ ಇರುವ ಆರೋಪಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ SBI ಬ್ಯಾಂಕ್, ಬ್ರಾಂಚ್ ಜಗಳೂರು ಇವರು ನೀಡಿದ ಮೆಮೋವನ್ನು ಹಾಜರುಪಡಿಸುತ್ತಿದ್ದು ಅದನ್ನು ನಿ.ಪಿ.2 ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ನಾನು ಆರೋಪಿಗೆ ನೀಡಿದ ಲೀಗಲ್ ನೋಟೀಸ್ ದಿ:17.03.2023 ಪ್ರತಿಯನ್ನು ಹಾಜರುಪಡಿಸುತ್ತಿದ್ದು ಅದನ್ನು ನಿ.ಪಿ.3 ಎಂದು ಗುರುತಿಸಲಾಯಿತು ಮತ್ತು ವಾಪಾಸ್ಸಾದ ಅಂಚೆ ಲಕೋಟೆಯನ್ನು ನಿಪಿ4 ಮತ್ತು ಅದರಲ್ಲಿ ಇರುವ ನೋಟೀಸನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ಅದನ್ನು ನಿಪಿ4(ಎ) ಎಂದು ಗುರುತಿಸಲಾಯಿತು.

ನನ್ನ ಪಿರ್ಯಾದಿಯಲ್ಲಿ ಕೋರಿರುವಂತೆ ಆದೇಶ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**<u>ಪಾಟೀ ಸವಾಲು:</u> ಆರೋಪಿ ಪರ ವಕೀಲರಿಂದ:-**

**(**ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ**,** ಪಾಟೀ ಸವಾಲು ಮುಂದೂಡಲಾಯಿತು**)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿ ಇದೆ**

**ಸಿವಿಲ್ ನ್ಯಾಯಾಧೀಶರು, ಜಗಳೂರು**